[2018] 6 ಎಸ್. ಸಿ. ಆರ್. 688

ಅವಿನಾಶ್ ಸಿ. ಮತ್ತು ಇತರರು.

ವಿ.

ಕರ್ನಾಟಕ ರಾಜ್ಯ ಮತ್ತು ಇತರರು.

(2018ರ ಸಿವಿಲ್ ಮೇಲ್ಮನವಿ ಸಂಖ್ಯೆ 3543-3555)

ಏಪ್ರಿಲ್ 04, 2018

[ನ್ಯಾ.ಆದರ್ಶ್ ಕುಮಾರ್ ಗೋಯೆಲ್ ಮತ್ತು ನ್ಯಾ.ಆರ್. ಎಫ್. ನಾರಿಮನ್.]

ಸೇವಾ ಕಾನೂನು- ಆಯ್ಕೆ ಪ್ರಕ್ರಿಯೆ - ರದ್ದುಪಡಿಸುವಿಕೆ - ಅಭ್ಯರ್ಥಿಗಳಿಂದ ಲಂಚ ಕೇಳಿದ ಆರೋಪ - ರಾಜ್ಯದಲ್ಲಿ ಗ್ರೂಪ್ 'ಎ'ಮತ್ತು ಗ್ರೂಪ್ 'ಡಿ'ಹುದ್ದೆಗಳನ್ನು ಭರ್ತಿ ಮಾಡುವ ಅಧಿಸೂಚನೆಯ ಅನುಸಾರ ಕರ್ನಾಟಕ ಲೋಕ ಸೇವಾ ಆಯೋಗ (ಕೆ.ಪಿ.ಎಸ್.ಸಿ.) ನಡೆಸಿದ ಆಯ್ಕೆಯಿಂದ ಉದ್ಭವಿಸಿದ ವಿಷಯ - ಪರೀಕ್ಷೆಗಳು ಮತ್ತು ಸಂದರ್ಶನಗಳ ನಿರ್ವಹಣೆಯಲ್ಲಿ ದುರಾಚಾರ ಮತ್ತು ಅಕ್ರಮಗಳ ಬಗ್ಗೆ ದೂರುಗಳು ಬಂದಿದ್ದವು - ಕೆ.ಪಿ.ಎಸ್.ಸಿ.ಯ ಅಧ್ಯಕ್ಷರು, ಸದಸ್ಯರು ಮತ್ತು ಕೆಲವು ಅಧಿಕಾರಿಗಳ ವಿರುದ್ಧ ಎಫ್.ಐ.ಆರ್ ದಾಖಲಾಗಿತ್ತು - ಸಿ.ಐ.ಡಿ.ಯ ಮಧ್ಯಂತರ ವರದಿಯನ್ನು ಸ್ವೀಕರಿಸಿದ ನಂತರ, ರಾಜ್ಯ ಸರ್ಕಾರವು ಲಿಖಿತ ಪರೀಕ್ಷೆ ಮತ್ತು ವ್ಯಕ್ತಿತ್ವ ಪರೀಕ್ಷೆಯ ಮೌಲ್ಯಮಾಪನವನ್ನು ರದ್ದುಗೊಳಿಸುವಂತೆ ನಿರ್ದೇಶಿಸಿತು - ಆದಾಗ್ಯೂ, ಕೆ.ಪಿ.ಎಸ್.ಸಿ.ಯು ಆಯ್ಕೆ ಪಟ್ಟಿಯನ್ನು ಪ್ರಕಟಿಸಿತು - ನೇಮಕಾತಿಯ ಕೋರಿಕೆಯನ್ನು ರಾಜ್ಯವು ಹಿಂತೆಗೆದುಕೊಂಡಿತು - ನ್ಯಾಯಮಂಡಳಿಯ ಮುಂದೆ ಯಶಸ್ವಿ ಅಭ್ಯರ್ಥಿಗಳು ಆದೇಶವನ್ನು ಪ್ರಶ್ನಿಸಿದ್ದು, ಅದು ರಾಜ್ಯದ ನಿರ್ಧಾರವನ್ನು

ರದ್ದುಗೊಳಿಸಿತು ಮತ್ತು ಆಯ್ಕೆಯಾದ ಅಭ್ಯರ್ಥಿಗಳ ನೇಮಕಾತಿಗೆ ನಿರ್ದೇಶಿಸಿತು - ಯಾವ ವ್ಯಕ್ತಿಗಳ ಆಯ್ಕೆಯ ಸಿಂಧುತ್ವವನ್ನು ಸರ್ಕಾರವು ತೀವ್ರವಾಗಿ ಅನುಮಾನಿಸುತ್ತೋ ಅಂತಹವರನ್ನು ನೇಮಕ ಮಾಡಿಕೊಳ್ಳುವಂತೆ ನಿರ್ದೇಶಿಸುವಲ್ಲಿ ನ್ಯಾಯಮಂಡಳಿಯು ತಪ್ಪೆಸಗಿದೆಯೆಂದು ಉಚ್ಚ ನ್ಯಾಯಾಲಯವು ಹೇಳಿದೆ - ಅದರ ಔಚಿತ್ಯತೆ - ಹೇಳಿದ್ದು - ಸರಿಯಾಗಿದೆ - ಕೆ.ಪಿ.ಎಸ್.ಸಿ.ಯ ಸದಸ್ಯರ ಮತ್ತು ಅಭ್ಯರ್ಥಿಗಳ ಕರೆ ವಿವರಗಳ ರೂಪದಲ್ಲಿ ಕಡತದಲ್ಲಿದ್ದ ದಾಖಲೆಯಲ್ಲಿರುವ ವಸ್ತುವನ್ನು ಉಚ್ಚ ನ್ಯಾಯಾಲಯವು ಉಲ್ಲೇಖಿಸಿದೆ - ಅಭ್ಯರ್ಥಿಗಳನ್ನು ಸಂದರ್ಶಿಸಿದ ಎಲ್ಲಾ ಸದಸ್ಯರು ನಿರ್ದಿಷ್ಟ ಅಭ್ಯರ್ಥಿಗಳಿಗೆ ನಿಖರವಾಗಿ ಒಂದೇ ರೀತಿಯ ಅಂಕಗಳನ್ನು ನೀಡಿದ್ದಾರೆ - ಸದಸ್ಯರಿಂದ ವೈಯಕ್ತಿಕವಾಗಿ ಯಾವುದೇ ವಸ್ತುನಿಷ್ಠ ಮೌಲ್ಯಮಾಪನವಿರಲಿಲ್ಲ - 566 ಅಭ್ಯರ್ಥಿಗಳಿಗೆ ಪೂರ್ವನಿರ್ಧರಿತವೆಂದು ತೋರುವ ಒಂದೇ ರೀತಿಯ ಅಂಕಗಳನ್ನು ನೀಡಲಾಗಿದೆ - ಸಾಕ್ಷ್ಯವನ್ನು ನಾಶಪಡಿಸಲು ಕೆ.ಪಿ.ಎಸ್.ಸಿ. ಕಟ್ಟಡದಲ್ಲಿದ್ದ ಡಿಜಿಟಲ್ ವೀಡಿಯೊ ರೆಕಾರ್ಡರನ್ನು ಬದಲಾಯಿಸಲಾಗಿದೆ - ಆಯ್ಕೆಯನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲವೆಂಬ ಉಚ್ಚ ನ್ಯಾಯಾಲಯದ ಅಭಿಪ್ರಾಯದೊಂದಿಗೆ ಹಸ್ತಕ್ಷೇಪ ಮಾಡಲು ಯಾವುದೇ ಆಧಾರವಿಲ್ಲ - ಆಯ್ಕೆಯು ಯಾವುದೇ ರೀತಿಯಲ್ಲಿ ಕಳಂಕಿತವಾಗಿದೆ ಎಂದು ಕಂಡುಬಂದಲ್ಲಿ, ಆಯ್ಕೆ ಪ್ರಕ್ರಿಯೆ ಶುದ್ಧತೆಯನ್ನು ಕಾಪಾಡಿಕೊಳ್ಳಲು ಅಂತಹ ಆಯ್ಕೆಯನ್ನು ರದ್ದುಗೊಳಿಸಲು ಸಂಬಂಧಿತ ಪ್ರಾಧಿಕಾರಕ್ಕೆ ಯಾವಾಗಲೂ ಮುಕ್ತ ಅವಕಾಶವಿದೆ - ಪ್ರಕ್ರಿಯೆಯೇ ಕಳಂಕಿತವಾಗಿದ್ದಾಗ ಕಳಂಕಿತ ಮತ್ತು ಕಳಂಕರಹಿತ ಅಭ್ಯರ್ಥಿಗಳನ್ನು ಪ್ರತ್ಯೇಕಿಸುವುದು ಎಲ್ಲಾ ಸಮಯದಲ್ಲೂ ಅಗತ್ಯವಿರಲಾರದು. ಮೇಲಾಗಿ, ನೇಮಕಾತಿಪೂರ್ವದ ಹಂತದಲ್ಲಿ ಆಯ್ಕೆ ಪ್ರಕ್ರಿಯೆಯನ್ನು ರದ್ದುಗೊಳಿಸುವ ನಿರ್ಣಯವು ಸ್ಪಷ್ಟವಾಗಿ ನಿರಂಕುಶ, ದುರುದ್ದೇಶಿತ ಅಥವಾ ಅಕ್ರಮವಾಗಿದ್ದರೆ ಮಾತ್ರ, ಅದರಲ್ಲಿ ಹಸ್ತಕ್ಷೇಪ

ಮಾಡಬಹುದಾಗಿದೆ - ಹಾಲಿ ಪ್ರಕರಣದಲ್ಲಿ, ಈ ಎಲ್ಲ ನಿಯತಾಂಕಗಳನ್ನು ಉಚ್ಚ ನ್ಯಾಯಾಲಯವು ಸರಿಯಾಗಿ ಅನ್ವಯಿಸಿದೆ ಮತ್ತು ಆಯ್ಕೆಯ ರದ್ದತಿಯ ನಿರ್ಣಯದೊಂದಿಗೆ ಹಸ್ತಕ್ಷೇಪಕ್ಕೆ ಯಾವುದೇ ಆಧಾರವಿಲ್ಲವೆಂದು ಕಂಡುಕೊಂಡಿದೆ.

ಸಿವಿಲ್ ಮೇಲ್ಮನವಿ ವ್ಯಾಪ್ತಿ : 2018ರ ಸಿವಿಲ್ ಮೇಲ್ಮನವಿ ಸಂಖ್ಯೆಗಳು: 3543-3555.

2017ರ 13617ರಿಂದ 13627ರವರೆಗಿನ ಸಂಖ್ಯೆಗಳ ರಿ.ಅ.(ಸಿ)ಗಳು ಮತ್ತು 2017ರ 14529ರ ಸಂಖ್ಯೆಯ ರಿ.ಅ.ಯಲ್ಲಿ ಬೆಂಗಳೂರಿನ ಕರ್ನಾಟಕ ಉಚ್ಚ ನ್ಯಾಯಾಲಯದ ದಿನಾಂಕ 09.03.2018ರ ತೀರ್ಪು ಮತ್ತು ಆದೇಶದಿಂದ.

ಹಾಜರಾದ ಪಕ್ಷಗಾರರ ಪರ: ದೇವದತ್ ಕಾಮತ್, ಹೆಚ್ಚುವರಿ ಅಡ್ವೋಕೇಟ್ ಜನರಲ್, ವಿ.ಗಿರಿ, ಗುರು ಕೃಷ್ಣಕುಮಾರ್, ರಾಜು ರಾಮಚಂದ್ರನ್, ಸಜನ್ ಪೂವಯ್ಯ, ನಾಗಮೋಹನ್ ದಾಸ್, ಎಂ.ಬಿ.ನರಗುಂದ್, ಹಿರಿಯ ವಕೀಲರು, ನಿಶಾಂತ್ ಪಾಟೀಲ್, ಶ್ರೀಮತಿ ಕೆ.ಪರಮೇಶ್ವರ್, ಪಿಥ್ನೀಶ್ ಎಂ.ಕೆ., ಪ್ರಸನ್ನ ಮೋಹನ್, ಬಿ.ಎಲ್.ಆಚಾರ್ಯ, ಶ್ರೀಮತಿ ಅನುರಾಧಾ ಮುಟಟ್ಕರ್, ಮೃಣಾಲ್ ಶಂಕರ್, ಪ್ರಿಯದರ್ಶಿ ಬ್ಯಾನರ್ಜಿ, ಸರನ್ಸ್ಹ ಕುಮಾರ್, ಸರನ್ಸ್ಹ ಜೈನ್, ಮೇಕಾ ವೆಂಕಟರಾಮ ಕೃಷ್ಣ, ಈಶ್ವರ್ ಮೊಹಂತಿ, ಬಾಲಾಜಿ ಶ್ರೀನಿವಾಸನ್, ಎಸ್.ಎನ್.ಭಟ್, ವಿ.ಎನ್.ರಘುಪತಿ, ರಾಜೇಶ್ ಇನಾಮ್ದಾರ್, ಜಾವೇದುರ್ ರಹಮಾನ್, ಪರಿಕ್ಷಿತ್ ಪಿ. ಅಂಗಡಿ, ಆದಿತ್ಯ ಭಟ್, ಪಿ.ಸಿಂಗ್, ಬಾಲಾಜಿ ಶ್ರೀನಿವಾಸನ್, ಶ್ರೀಮತಿ ರೇಖಾ ಚಂದ್ರಶೇಖರ್, ಎಚ್.ಚಂದ್ರಶೇಖರ್, ವಿಕ್ರಮ್ ಫಡ್ಕೆ, ಆಶ್ವಿನ್ ವಿ.ಕೋಟೆಮಠ, ಶ್ರೀಮತಿ ಎಸ್.ಉಷಾ ರೆಡ್ಡಿ.

ಈ ಕೆಳಗಿನಂತೆ ನ್ಯಾಯಾಲಯದ ಆದೇಶವನ್ನು ಹೊರಡಿಸಲಾಯಿತುಃ

<u>ಆದೇಶ</u>

1. ಹಾಜರಾದ ಪಕ್ಷಗಾರರ ಮಾನ್ಯ ವಕೀಲರ ವಾದವನ್ನು ನಾವು ಆಲಿಸಿದೆವು. ಪ್ರಸ್ತಾವಿತ ಆದೇಶದ ಸ್ವರೂಪವನ್ನು ಪರಿಗಣಿಸಿ, ಪ್ರತಿನಿಧಿಸದ ಎಲ್ಲಾ ಪಕ್ಷಗಾರರಿಗೆ ಸೂಚನೆ ನೀಡುವುದು ಅಗತ್ಯವೆಂದು ನಾವು ಪರಿಗಣಿಸುವುದಿಲ್ಲ.

2. ಕರ್ನಾಟಕ ರಾಜ್ಯದಲ್ಲಿ ಗ್ರೂಪ್ 'ಎ'ಮತ್ತು ಗ್ರೂಪ್ 'ಡಿ'ಯ 362 ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕ ಸೇವಾ ಆಯೋಗವು ("ಕೆಪಿಎಸ್ಸಿ") ದಿನಾಂಕ 3.1.2011ರ ಅಧಿಸೂಚನೆಯ ಪ್ರಕಾರ ನಡೆಸಿದ ಆಯ್ಕೆಯಿಂದ ಈ ವಿಷಯವು ಉದ್ಭವಿಸಿದೆ. ಪರೀಕ್ಷೆಗಳನ್ನು 22.04.2012ರಲ್ಲಿ ನಡೆಸಲಾಯಿತು. ಮುಖ್ಯ ಪರೀಕ್ಷೆಗಳಿಗೆ 15.12.2012 ಮತ್ತು 16.01.2013ರ ನಡುವೆ ಲಿಖಿತ ಪರೀಕ್ಷೆಗಳನ್ನು ನಡೆಸಲಾಯಿತು. ಸಂದರ್ಶನಗಳನ್ನು 01-04-2013 ಮತ್ತು 27.05.2013ರ ನಡುವೆ ನಡೆಸಲಾಯಿತು.

3. ಪರೀಕ್ಷೆಗಳು ಮತ್ತು ಸಂದರ್ಶನಗಳ ನಿರ್ವಹಣೆಯಲ್ಲಿ ಅಕ್ರಮಗಳು ಮತ್ತು ದುರಾಚಾರಗಳು ನಡೆದ ಬಗ್ಗೆ ದೂರುಗಳು ಬಂದಿದ್ದವು. ಇದಲ್ಲದೆ, ಅಭ್ಯರ್ಥಿಗಳಿಂದ ಲಂಚ ಕೇಳಿದ ಬಗ್ಗೆ ಆರೋಪಿಸಲಾಗಿತ್ತು. ಕೆ.ಪಿ.ಎಸ್.ಸಿ.ಯ ಅಧ್ಯಕ್ಷರು, ಸದಸ್ಯರು ಮತ್ತು ಕೆಲವು ಅಧಿಕಾರಿಗಳ ವಿರುದ್ಧ ಎಫ್ಐಆರ್ ದಾಖಲಿಸಲಾಗಿತ್ತು. 2013ರ ಸೆಪ್ಟೆಂಬರ್ 10ರಂದು ಸಿಐಡಿಯ ಮಧ್ಯಂತರ ವರದಿಯನ್ನು ಸ್ವೀಕರಿಸಿದ ನಂತರ, ರಾಜ್ಯ ಸರ್ಕಾರವು 2013ರ ಡಿಸೆಂಬರ್ 15ರಂದು ಲಿಖಿತ ಪರೀಕ್ಷೆ ಮತ್ತು ವ್ಯಕ್ತಿತ್ವ ಪರೀಕ್ಷೆಯ ಮೌಲ್ಯಮಾಪನವನ್ನು ರದ್ದುಗೊಳಿಸುವಂತೆ ನಿರ್ದೇಶಿಸಿತು. ಆದಾಗ್ಯೂ, ಕೆಪಿಎಸ್ಸಿಯು ಆಯ್ಕೆ ಪಟ್ಟಿಯನ್ನು ಪ್ರಕಟಿಸಿತು. ರಾಜ್ಯ ಸರ್ಕಾರವು 14.08.2014ರಲ್ಲಿ ನೇಮಕಾತಿಗಳ ಕೋರಿಕೆಯನ್ನು ಹಿಂತೆಗೆದುಕೊಂಡಿತು.

4. ಈ ಮೇಲಿನ ಆದೇಶವನ್ನು ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿಯ ಮುಂದೆ ಯಶಸ್ವಿ ಅಭ್ಯರ್ಥಿಗಳು ಪ್ರಶ್ನಿಸಿದರು. ನ್ಯಾಯಮಂಡಳಿಯು 2016ರ ಅಕ್ಟೋಬರ್ 19ರ ಆದೇಶದ ಮೂಲಕ ರಾಜ್ಯ ಸರ್ಕಾರದ ನಿರ್ಧಾರವನ್ನು ರದ್ದುಗೊಳಿಸಿತು ಮತ್ತು ಆಯ್ಕೆಯಾದ ಅಭ್ಯರ್ಥಿಗಳನ್ನು ನೇಮಿಸುವಂತೆ ನಿರ್ದೇಶಿಸಿತು. ಆಯ್ಕೆಯಾದ ಕೆಲವು ಅಭ್ಯರ್ಥಿಗಳಿಗೆ ನೇಮಕಾತಿಗಳನ್ನು ನೀಡಲಾಯಿತು.

5. ನ್ಯಾಯಮಂಡಳಿಯ ಆದೇಶವನ್ನು ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಯಿತು. ಪ್ರಶ್ನಿತ ಆದೇಶದ ಮೂಲಕ ಉಚ್ಚ ನ್ಯಾಯಾಲಯವು ನ್ಯಾಯಮಂಡಳಿಯ ಆದೇಶವನ್ನು ರದ್ದುಗೊಳಿಸಿತು. ಉಚ್ಚ ನ್ಯಾಯಾಲಯವು ಈ ರೀತಿ ತೀರ್ಮಾನಿಸಿದೆಃ

> "55.ಪಲಿತಾಂಶಕ್ಕನುಸಾರವಾಗಿ, ಈ ರಿಟ್ ಅರ್ಜಿಗಳು ವಿಶೇಷವಾಗಿ ಮಂಜೂರಾಗಲು ಅರ್ಹವಾಗಿವೆ ಮತ್ತು ಆ ಪ್ರಕಾರವಾಗಿಃ
>
> ಎ) ರಿಟ್ ಅರ್ಜಿ ಸಂಖ್ಯೆ 13617-13627/2017 & 14529/2017 ಮತ್ತು ರಿಟ್ ಅರ್ಜಿ ಸಂಖ್ಯೆ 11342/2017ಗಳನ್ನು ಮಂಜೂರು ಮಾಡಿದೆ.
>
> ಬಿ) ಅರ್ಜಿಗಳ ಸಂಖ್ಯೆ:6268/2014 ರಿಂದ 6395/2014, ಅದರೊಂದಿಗೆ ಜೋಡಿಸಿದ 6432/2014 ರಿಂದ 6444/2014, 6446/2014 ರಿಂದ 6459/ 2014, 6597/2014 ಮತ್ತು 6598/2014, 7464/2014, 7941/2014 ರಿಂದ 7946/2014, 7950/2014 ರಿಂದ 7966/2014, 7967/2014, 7968/2014, 7969/2014, 9112/2014 ರಿಂದ 9126/2014, 9592/2014 ರಿಂದ 9610/2014 ಮತ್ತು 8298/2015ಗಳಲ್ಲಿ ದಿನಾಂಕ 19.10.2016ರಂದು ಬೆಂಗಳೂರಿನ ಕರ್ನಾಟಕ ರಾಜ್ಯ ಆಡಳಿತಾತ್ಮಕ ನ್ಯಾಯಮಂಡಳಿಯು ಹೊರಡಿಸಿದ ಸಾಮಾನ್ಯ ಆದೇಶವನ್ನು ರದ್ದುಗೊಳಿಸಿದೆ.

ಸಿ) ಕರ್ನಾಟಕ ಸರ್ಕಾರದ ಡಿಪಿಎಆರ್ ಸೇವೆಗಳ ಉಪ ಕಾರ್ಯದರ್ಶಿಯು ಹೊರಡಿಸಿದ ದಿನಾಂಕ 17.3.2017ರ ಅನಧಿಕೃತ ಟಿಪ್ಪಣಿ ಸಂಖ್ಯೆ 139 ಸಿಎಸು 139 ಸಾಲೋಸಾ 2016ನ್ನು ರದ್ದುಪಡಿಸಲಾಗಿದೆ;

ಡಿ) ಬೆಂಗಳೂರಿನ ಪುರಸಭೆ ಆಡಳಿತದ ನಿರ್ದೇಶಕರು ಹೊರಡಿಸಿದ ದಿನಾಂಕ 27.03.2017ರ ಅಧಿಕೃತ ಜ್ಞಾಪಕ ಪತ್ರ ಸಂಖ್ಯೆ 19457 ಡಿ.ಎಂ.ಎ.32 ಕಮಸ್ 2016-17ನ್ನು ರದ್ದುಪಡಿಸಲಾಗಿದೆ.

ಇ) ಕೆ.ಪಿ.ಎಸ್.ಸಿ. ಸಿದ್ಧಪಡಿಸಿದ ದಿನಾಂಕ 21.03.2014ರ ಅಂತಿಮ ಆಯ್ಕೆ ಪಟ್ಟಿಗೆ ಅನುಸಾರವಾಗಿ ನೀಡಲಾದ ಎಲ್ಲಾ ನೇಮಕಾತಿ ಆದೇಶಗಳನ್ನು ಕಾನೂನುಬಾಹಿರವೆಂದು ಘೋಷಿಸಲಾಗಿದೆ ಮತ್ತು ರದ್ದುಗೊಳಿಸಲಾಗಿದೆ; ಮತ್ತು

ಎಫ್) 2011ರ ಗೆಜೆಟೆಡ್ ಪ್ರೊಬೇಷನರಿಗಳ ಆಯ್ಕೆಗಾಗಿ ಕೆ.ಪಿ.ಎಸ್.ಸಿ.ಗೆ ನೀಡಲಾದ ವಿನಂತಿಗಳನ್ನು ಹಿಂಪಡೆಯಲು ಮತ್ತು ಆಯ್ಕೆ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಲು ದಿನಾಂಕ 14.8.2014ರಂದು ಹೊರಡಿಸಿದ ಸಿಎಎ.ಎಸ್.ಯು.ಇ 53 ಸಾಲೋಸಾ 2014 ಸಂಖ್ಯೆಯ ಸರ್ಕಾರಿ ಆದೇಶವನ್ನು ಉಳಿಸಿಕೊಳ್ಳಲಾಗಿದೆ ".

6. ಅನರ್ಹ, ಅಸಮರ್ಥ ಅಥವಾ ಪ್ರಶ್ನಾರ್ಹ ಪ್ರಾಮಾಣಿಕತೆಯ ವ್ಯಕ್ತಿಗಳ ನೇಮಕವು ಸರ್ಕಾರದ ಕಾರ್ಯವೈಖರಿಯ ಮೇಲೆ ಗಂಭೀರ ಪ್ರತಿಕೂಲ ಪರಿಣಾಮ ಬೀರುತ್ತದೆ ಮತ್ತು ಇದು ಕಾನೂನಿನ ಆಡಳಿತಕ್ಕೆ ಶಾಪವಾಗಿದೆ ಎಂದು ಉಚ್ಚ ನ್ಯಾಯಾಲಯವು ಗಮನಿಸಿದೆ. ಸರ್ಕಾರದ ಸೇವೆಗೆ ಅತ್ಯುತ್ತಮ ಆಯ್ಕೆಯು ಸಂವಿಧಾನದ ಆಜ್ಞಾಪನೆಯಾಗಿತ್ತು. ಕೇವಲ ಆಯ್ಕೆ ಪಟ್ಟಿಯಲ್ಲಿದ್ದ ಮಾತ್ರಕ್ಕೆ ಅಭ್ಯರ್ಥಿಗಳಿಗೆ ಯಾವುದೇ ಹಕ್ಕು ದೊರೆಯುವುದಿಲ್ಲ. ಹೀಗಾಗಿ, ಯಾವ ವ್ಯಕ್ತಿಗಳ ಆಯ್ಕೆಯ ಸಿಂಧುತ್ವವನ್ನು ಸರ್ಕಾರವು ತೀವ್ರವಾಗಿ

ಅನುಮಾನಿಸುತ್ತೋ ಅಂತಹವರನ್ನು ನೇಮಕ ಮಾಡಿಕೊಳ್ಳುವಂತೆ ನಿರ್ದೇಶಿಸುವಲ್ಲಿ ನ್ಯಾಯಮಂಡಳಿಯು ತಪ್ಪೆಸಗಿದೆ.

7. ಕೆ.ಪಿ.ಎಸ್.ಸಿ.ಯ ಸದಸ್ಯರು ಮತ್ತು ಅಭ್ಯರ್ಥಿಗಳ ನಡುವಿನ ಕರೆ ವಿವರಗಳ ರೂಪದಲ್ಲಿ ದಾಖಲೆಯಲ್ಲಿರುವ ವಸ್ತುವನ್ನು ಉಚ್ಚ ನ್ಯಾಯಾಲಯವು ಉಲ್ಲೇಖಿಸಿದೆ ಎಂದು ನಾವು ಕಂಡುಕೊಂಡಿದ್ದೇವೆ. ಅಭ್ಯರ್ಥಿಗಳನ್ನು ಸಂದರ್ಶಿಸಿದ ಎಲ್ಲಾ ಸದಸ್ಯರು ನಿರ್ದಿಷ್ಟ ಅಭ್ಯರ್ಥಿಗಳಿಗೆ ನಿಖರವಾಗಿ ಒಂದೇ ರೀತಿಯ ಅಂಕಗಳನ್ನು ನೀಡಿದ್ದಾರೆ. ಸದಸ್ಯರಿಂದ ವೈಯಕ್ತಿಕವಾಗಿ ಯಾವುದೇ ವಸ್ತುನಿಷ್ಠ ಮೌಲ್ಯಮಾಪನವಿರಲಿಲ್ಲ. ಅಂಕಗಳನ್ನು ನೀಡುವಲ್ಲಿ ಬಾಹ್ಯ ಕಾರಣಗಳಿವೆ ಎಂದು ತೋರುತ್ತದೆ. 566 ಅಭ್ಯರ್ಥಿಗಳಿಗೆ ಪೂರ್ವನಿರ್ಧರಿತ ಎಂದು ತೋರುವ ಅದೇ ಅಂಕಗಳನ್ನು ನೀಡಲಾಗಿದೆ. ಸಾಕ್ಷ್ಯವನ್ನು ನಾಶಪಡಿಸಲು ಕೆ.ಪಿ.ಎಸ್.ಸಿ. ಕಟ್ಟಡದಲ್ಲಿದ್ದ ಡಿಜಿಟಲ್ ವಿಡಿಯೋ ರೆಕಾರ್ಡರನ್ನು ಬದಲಾಯಿಸಲಾಗಿದೆ. ಈ ಕಾರಣಕ್ಕಾಗಿ, ಆಯ್ಕೆಯು ಊರ್ಜಿತವಾಗಲು ಸಾಧ್ಯವಿಲ್ಲ ಎಂಬ ಉಚ್ಚ ನ್ಯಾಯಾಲಯದ ಅಭಿಪ್ರಾಯದಲ್ಲಿ ಹಸ್ತಕ್ಷೇಪ ಮಾಡಲು ನಮಗೆ ಯಾವುದೇ ಆಧಾರ ಕಂಡುಬರುವುದಿಲ್ಲ. ಆಯ್ಕೆಯು ಯಾವುದೇ ರೀತಿಯಲ್ಲಿ ಕಳಂಕಿತವಾಗಿದೆ ಎಂದು ಕಂಡುಬಂದರೆ, ಆಯ್ಕೆ ಪ್ರಕ್ರಿಯೆಯ ಶುದ್ಧತೆಯನ್ನು ಕಾಪಾಡಿಕೊಳ್ಳಲು ಅಂತಹ ಆಯ್ಕೆಯನ್ನು ರದ್ದುಗೊಳಿಸಲು ಸಂಬಂಧಿತ ಪ್ರಾಧಿಕಾರಕ್ಕೆ ಯಾವಾಗಲೂ ಮುಕ್ತ ಅವಕಾಶವಿರುತ್ತದೆ. ಪ್ರಕ್ರಿಯೆ ಸ್ವತಃ ಕಳಂಕಿತವಾಗಿದ್ದಾಗ ಕಳಂಕಿತ ಮತ್ತು ಕಳಂಕರಹಿತ ಅಭ್ಯರ್ಥಿಗಳನ್ನು ಪ್ರತ್ಯೇಕಿಸುವುದು ಎಲ್ಲಾ ಸಮಯದಲ್ಲೂ ಅಗತ್ಯವಿರಲಾರದು. ಮೇಲಾಗಿ, ನೇಮಕಾತಿಪೂರ್ವದ ಹಂತದಲ್ಲಿ ಆಯ್ಕೆ ಪ್ರಕ್ರಿಯೆಯನ್ನು ರದ್ದುಗೊಳಿಸುವ ನಿರ್ಣಯವು ಸ್ಪಷ್ಟವಾಗಿ ನಿರಂಕುಶ, ದುರುದ್ದೇಶಿತ ಅಥವಾ ಅಕ್ರಮವಾಗಿದ್ದರೆ ಮಾತ್ರ, ಅದರೊಂದಿಗೆ ಹಸ್ತಕ್ಷೇಪ ಮಾಡಬಹುದಾಗಿದೆ.ಹಾಲಿ ಪ್ರಕರಣದಲ್ಲಿ, ಈ ಎಲ್ಲ ನಿಯತಾಂಕಗಳನ್ನು ಉಚ್ಚ ನ್ಯಾಯಾಲಯವು ಸರಿಯಾಗಿ ಅನ್ವಯಿಸಿದೆ ಮತ್ತು

ಆಯ್ಕೆಯ ರದ್ದತಿಯ ನಿರ್ಣಯದೊಂದಿಗೆ ಹಸ್ತಕ್ಷೇಪಕ್ಕೆ ಯಾವುದೇ ಆಧಾರವಿಲ್ಲವೆಂದು ಕಂಡುಕೊಂಡಿದೆ.

8. ಲಿಖಿತ ಪರೀಕ್ಷೆಯು ಯಾವುದೇ ಅಕ್ರಮಗಳಿಂದ ಕಲುಷಿತಗೊಂಡಿಲ್ಲ ಮತ್ತು ಅದನ್ನು ಉಳಿಸಿಕೊಳ್ಳಬಹುದು, ಸಂದರ್ಶನಗಳನ್ನು ಮತ್ತೆ ನಡೆಸಬಹುದು ಎಂದು ಕೆಲವು ಪಕ್ಷಗಾರರ ಮಾನ್ಯ ವಕೀಲರು ಮನವಿ ಮಾಡಿದರು.

9. ಈ ನಿಲುವನ್ನು ಉಚ್ಚ ನ್ಯಾಯಾಲಯದಲ್ಲಿ ತಳೆದಿರುವುದು ತೋರುತ್ತಿಲ್ಲವಾದ್ದರಿಂದ, ಈಗ ಯಾವೊಬ್ಬ ಪಕ್ಷಗಾರರಾದರೂ ಇಂದಿನಿಂದ ಎರಡು ವಾರಗಳಲ್ಲಿ ಉಚ್ಚ ನ್ಯಾಯಾಲಯದಲ್ಲಿ ಈ ನಿಲುವನ್ನು ಮಂಡಿಸಲು ನಾವು ಅನುಮತಿಸುತ್ತೇವೆ. ಅಂತಹ ಅರ್ಜಿಯನ್ನು ಸಲ್ಲಿಸಿದರೆ, ಉಚ್ಚ ನ್ಯಾಯಾಲಯವು ಅರ್ಹತೆಗಳ ಆಧಾರದ ಮೇಲೆ ಅದನ್ನು ಪರಿಶೀಲಿಸಬಹುದು. ಲಿಖಿತ ಪರೀಕ್ಷೆಯು ಯಾವುದೇ ಕಳಂಕದಿಂದ ಮುಕ್ತವಾಗಿದೆ ಎಂದು ಉಚ್ಚ ನ್ಯಾಯಾಲಯವು ಕಂಡುಕೊಂಡರೆ, ಉಚ್ಚ ನ್ಯಾಯಾಲಯವು ಲಿಖಿತ ಪರೀಕ್ಷೆಯ ಫಲಿತಾಂಶವನ್ನು ಮರುಸ್ಥಾಪಿಸಲು ಮತ್ತು ಮುಂದಿನ ಆಯ್ಕೆ ಪ್ರಕ್ರಿಯೆಯನ್ನು ನಡೆಸಲು ಪರಿಗಣಿಸಬಹುದು. ಎಲ್ಲಾ ಅಭ್ಯರ್ಥಿಗಳ ಬರಹಗಳ ಮರುಮೌಲ್ಯಮಾಪನವನ್ನು ನಡೆಸಲು ಅಥವಾ ಲಿಖಿತ ಪರೀಕ್ಷೆಯ ಫಲಿತಾಂಶವನ್ನು ರದ್ದುಗೊಳಿಸುವುದನ್ನು ಉಳಿಸಿಕೊಂಡು ಹೊಸದಾಗಿ ಆಯ್ಕೆಯನ್ನು ನಡೆಸುವಂತೆ ನಿರ್ದೇಶಿಸಲು ಉಚ್ಚ ನ್ಯಾಯಾಲಯಕ್ಕೆ ಮುಕ್ತ ಅವಕಾಶವಿರುತ್ತದೆ. ಉಭಯತ್ರರ ನಿಲುವುಗಳ ಅರ್ಹತೆಗಳ ಬಗ್ಗೆ ಉಚ್ಚ ನ್ಯಾಯಾಲಯವು ಪರಿಶೀಲಿಸಲು ಮುಕ್ತವಾಗಿದ್ದು, ನಾವು ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸುವುದಿಲ್ಲ. ಈ ವಿಷಯದಲ್ಲಿ ಆದ್ಯತೆಯ ಮೇರೆಗೆ ಆದಷ್ಟು ಬೇಗ ಉಚ್ಚ ನ್ಯಾಯಾಲಯಕ್ಕೆ ಹೋದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಉಚ್ಚ ನ್ಯಾಯಾಲಯವು ನಿರ್ಧಾರ ತೆಗೆದುಕೊಳ್ಳಬಹುದು.

ಮೇಲ್ಕನವಿಗಳನ್ನು ಮೇಲಿನ ಷರತ್ತುಗಳಲ್ಲಿ ವಿಲೇವಾರಿ ಮಾಡಲಾಗಿದೆ.

ಅಂಕಿತ್ ಗ್ಯಾನ್ ಮೇಲ್ಕನವಿಗಳನ್ನು ವಿಲೇವಾರಿ ಮಾಡಲಾಗಿದೆ.

ಅನಾ/-